ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪರ್ಯಾಯ ಅಭಿವೃದ್ಧಿ ಮಂಡಲಿ ಎಂದು ಏನು ರಚನೆ ಮಾಡಿದ್ದಾರೆ, ಅನೇಕ ಸೊಸೈಟಿಗಳನ್ನು ಮಾಡಿ ತಾವೇ ತಾವೇ ಸೈಟ್ ಹಂಚಿಬಿಟ್ಟು, ಇದರಲ್ಲಿ ಲೂಟಿ ನಡೆಯುತ್ತಿದೆ. ಜಿ.ವಿ.ಕೆ. ರಾವ್ ವರದಿ ಸ್ಪಷ್ಟವಾಗಿ ಹೇಳಿದ್ದಾರೆ. ನೆಲೆಗಳ್ಳರು ಎಂದು ಇದೇ ಸದನದಲ್ಲಿ ಪ್ರಸ್ತಾಪವಾಗಿತ್ತು. ನಾನು ಹೇಳುತ್ತೇನೆ, ಹೌಸಿಂಗ್ ಸೊಸೈಟಿ ಅವರ ಹತ್ತಿರ ಇವರು ಸೈಟನ್ನು ವ್ಯಾಪಾರ ಮಾಡಿ ಹಂಚುವುದಕ್ಕೆ ಹೋಗಬೇಡಿ. ಪ್ರಾಧಿಕಾರವೇ ನೀವು ಹಿಂದಕ್ಕೆ ಸೈಟ್‌ಗಳನ್ನು ತೆಗೆದು ಕೊಂಡು ಕೊಟ್ಟರೆ ಒಳ್ಳೆಯದು.

MR. SPEAKER :- Mr. Anant Nag, you please make use of the assistance of Mr. Roshan Baig. He will be very much useful to you in this regard as Home Minister. It is only that Department which can give solution to all you problems. We are citizens. There are 3 categories of animals, (1) Wild animals, 2) Pet animals and 3) Bad animals. Well, I put them under the first category. They are not useful to anybody. ಬಾಲಕೃಷ್ಣರವರೇ, ತಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :- ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15 ನೇ ಪಟ್ಟಿಯಲ್ಲಿರುವ 61 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ :- ಕೆ.ಎ.ಎಸ್., ಕೆ.ಪಿ.ಎಸ್. ಕೆ.ಎಫ್.ಎಸ್.ನವರಿಗೆ ಬಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 915 (1802)

ಶ್ರೀ ಅಯನೂರು ಮಂಜುನಾಥ (ಹೊಸನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕೆಎಎಸ್, ಕೆಸಿಎಸ್, ಕೆಎಫ್ಎಸ್‌ನವರಿಗೆ ಬಡ್ತಿ ಸೇವೆಯ ಶೇಕಡ ಎಷ್ಟು ಪ್ರಮಾಣದಲ್ಲಿ ಐಎಎಸ್, ಐಪಿಎಸ್, ಐಎಫ್ಎಸ್ ನೀಡಲಾಗುತ್ತಿದೆ ; ಕಳೆದ 4 ವರ್ಷಗಳಲ್ಲಿ ರಾಜ್ಯದ ಶೇಕಡವಾರು ನಿಯಮದನ್ವಯ ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ (ವಿವರವಾದ ಪಟ್ಟಿ ನೀಡುವುದು)

ಆ) ಆಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಕನ್ನಡಿಗ ಅಧಿಕಾರಿಗಳು ಉನ್ನತ ಸ್ಥಾನದಲ್ಲಿರುವುದು ಸಮಂಜಸವಲ್ಲವೆ?